
ಮಾಟ, ಮದ್ದುಗಳನ್ನು ಕಂಡಿಲ್ಲ! ನನ್ನ ಮುಂದೆ ಇಂಥ ಆಟವೆಲ್ಲ ನಡೆಯೋದಿಲ್ಲ! ಎಂದು ಅಬ್ಬರಿಸಿದ.

ನಂತರ ಕರಿವೀರನನ್ನು ಕರೆದು ಅಲ್ಲಿ ಸಿಕ್ಕ ವಸ್ತುಗಳಿಗೆ ಅವನ ಕೈಯಿಂದಲೇ ಬೆಂಕಿ ಇಡಿಸಿದ. ಇನ್ನು ನಡೆಯಿರಿ ಎಂದು ತೋಟದ ಮನೆಯ ಮುಂದೆ ಪ್ರತಿಷ್ಠಾಪಿಸಿದ ತನ್ನ ದೇವಿಯ ಮೂರ್ತಿಯ ಮುಂದೆ ಅನ್ನಪೂರ್ಣ ಮತ್ತು ಕರಿವೀರನನ್ನು ನಿಲ್ಲಿಸಿ ಬೇವಿನ ಸೊಪ್ಪಿನಿಂದ ತಲೆಗೆ, ಮೈಗೆ ಬಡಿಯುತ್ತಾ ದೋಷವೆಲ್ಲಾ ಇನ್ನು ಪರಿಹಾರವಾಗಿದೆ ಎಂದು ಇಬ್ಬರ ಕೊರಳಿಗೆ ಈಗಾಗಲೇ ಸಿದ್ಧಪಡಿಸಿಟ್ಟುಕೊಂಡಿದ್ದ ಅಂತ್ರಗಳನ್ನು ಕಟ್ಟಿದ. ಇನ್ನು ಸುಖವಾಗಿ ಬಾಳಿರಿ ಎಂದು ಆಶೀರ್ವದಿಸಿ ತನಗೆ ಬರಬೇಕಾದದ್ದನ್ನು ಸುಭದ್ರಮ್ಮನಿಂದ ಪಡೆದು, ಸುರೇಶನತ್ತ ನೋಡಿ ಕಿರುನಗೆಯನ್ನು ಬೀರಿ ಹೊರಟ.

ವಾಸ್ತವದಲ್ಲಿ ಕರಿವೀರನ ಮನಸ್ಸಿಗೆ ಆಗಿರಬಹುದಾದ ಘಾತವನ್ನು ಹೊರ ತೆಗೆಯಲು ಸುರೇಶ ತನ್ನ ತಾಯಿಯಾದ ಹನುಮಕ್ಕ ಪದೇ ಪದೇ ಹೇಳುತ್ತಿದ್ದ ಮಾಟದ ಬಗ್ಗೆ ಆಲೋಚಿಸಿ ತಂತ್ರವನ್ನು ಹೂಡಿದ್ದ. ಈ ನಡುವೆ ಒಂದು ದಿನ ತನ್ನ ಮಾವ ಕರಿವೀರನನ್ನು ಮಾತನಾಡಿಸುವ ನೆಪದಲ್ಲಿ ತೋಟಕ್ಕೆ ಹೋಗಿ, ತೋಟದ ಜಮೀನಿನ ದಕ್ಷಿಣ ದಿಕ್ಕಿನ ಮೂಲೆಯ ತಂಗಟಿ ಗಿಡದ ಪೊದೆಯ ಕೆಳಗೆ ಸ್ವಲ್ಪ ಕುಣಿ ತೋಡಿ, ಹೆಣ್ಣು-ಗಂಡಿನ ಎರಡು ಗೊಂಬೆಗಳು, ನಿಂಬೆಹಣ್ಣು, ಕುಂಕುಮ ಮತ್ತು ಹಚ್ಚಿದ ತಾಮ್ರದ ತಗಡಿನ ತುಂಡು, ಸುಣ್ಣಗಾಯಿ ಡಬ್ಬಿಯಲ್ಲಿ ಕಾಡಿಗೆ ತುಂಬಿ ಅವುಗಳನ್ನು ಹೂತಿಟ್ಟಿದ್ದ. ತನ್ನ ಕರ್ತವ್ಯಕ್ಕೆ ಹೋಗುವ ನೆಪ ಹೇಳಿ ಭೈರದೇವರಗುಡ್ಡಕ್ಕೆ ಹೋಗಿ ಈ ಮಾಟದ ವಿಷಯದ ಬಗೆಗಿನ ತಂತ್ರವನ್ನು ಮಂತ್ರವಾದಿ ಪರಮೇಶ್ವರಪ್ಪನಿಗೂ ಹೇಳಿ ಬಂದಿದ್ದ. ತನ್ನ ತಾಯಿ ಮತ್ತು ಚಿಕ್ಕಮ್ಮಳಾದ ಸುಭದ್ರಮ್ಮಳು ಮಾಟ ತೆಗೆಸುವುದಕ್ಕೆ ಈ ಮಂತ್ರವಾದಿಗಳ ಹತ್ತಿರ ಬಂದೇ ಬರುತ್ತಾರೆಂಬ ನಂಬಿಕೆಯಿಂದ.

ಕರಿವೀರ ಮುಂದೆ ಮುಂದೆ ಹೆಜ್ಜೆ ಹಾಕುತ್ತಾ ಊರಿನ ಮನೆಯ ಕಡೆ ನಡೆಯಲು ಪ್ರಾರಂಭಿಸಿದ. ಅವನ ಹಿಂದೆ ಅನ್ನಪೂರ್ಣಳೂ ಹೊರಟಳು. ಕಳೆದ ವಾರ ಸುರೇಶ ಕಡಬನೂರು ಆಸ್ಪತ್ರೆಯಿಂದ ತಂದು ಕೊಟ್ಟಿದ್ದ ಆಯಿಂಟ್‌ಮೆಂಟನ್ನು ಹಚ್ಚಿದ್ದರಿಂದ ಅವನ ಕಾಲಿನಲ್ಲಿ ಆಗಿದ್ದ ಕುರುವಿನ ಹುಣ್ಣು ಒಣಗಿತ್ತು. ಗಾಯದ



ಮೇಲೆ ಕಟ್ಟಿಕೊಂಡಿದ್ದ ಬಟ್ಟೆಯನ್ನು ಯಾವಾಗಲೋ ಕಿತ್ತುಹಾಕಿದ್ದ. ಎಂದಿನಂತೆ ಕರಿವೀರ ಬೆಳಗ್ಗೆಯೇ ಎದ್ದು ತೋಟಕ್ಕೆ ಹೊರಡಲು ಸಿದ್ಧವಾಗುತ್ತಿದ್ದಂತೆ ಅನ್ನಪೂರ್ಣ ಕೈಯಲ್ಲಿ ಕಾಫಿ ಲೋಟ ಹಿಡಿದು ನಿಂತಿದ್ದಳು. ಕರಿವೀರನಿಗೆ ಆಶ್ಚರ್ಯವಾಯಿತು. ಅನ್ನಪೂರ್ಣಳ ಮುಖ ನೋಡಿದ. ಅವಳ ಮುಖ ನಗುವಿನಿಂದ ತುಳುಕುತ್ತಿತ್ತು. ಅವನಲ್ಲೂ ಅದುಮಿಟ್ಟದ್ದ ಭಾವನೆಗಳೆಲ್ಲ ಒಮ್ಮೆಲೇ ಕಾಣಿಸಿಕೊಂಡವು. ಕಾಫಿ ಕುಡಿದು, ನಗುತ್ತಾ ತೋಟಕ್ಕೆ ಹೊರಟ. 'ರೀ... ಮಕ್ಕಳನ್ನು ಸ್ಕೂಲಿಗೆ ಕಳುಹಿಸಿ ತಿಂಡಿ ತೋಟಕ್ಕೆ ತರುತ್ತೀನಿ' ಎಂದ ಅನ್ನಪೂರ್ಣ ಮಕ್ಕಳನ್ನು ಎಬ್ಬಿಸಲು ಮುಂದಾದಳು. ಕರಿವೀರನಿಗೆ ಕಳೆದುಹೋಗಿದ್ದ ಅವನ ಅಮೂಲ್ಯ ವಸ್ತು ಮರಳಿ ಸಿಕ್ಕಷ್ಟು ಸಂತೋಷವಾಯಿತು. ಹೇಳಲಾರದ ಹೊಸ ಉತ್ಸಾಹ ಅವನನ್ನು ಆವರಿಸಿಕೊಂಡಿತ್ತು. ಹೊಳೆಯಲ್ಲಿ ದಿಕ್ಕುತಪ್ಪಿದ್ದ ದೋಣಿ ಈಗ ಸರಾಗವಾಗಿ ನಡೆಯುವಂತಾಯಿತು. ಕರಿವೀರ 'ಆಯಿತು ಬಾ' ಎಂದು ಹೇಳಿ ವಲ್ಲಿ ಹೆಗಲಿಗೇರಿಸಿ ಹೊರಟ.

●